ಫೆಬ್ರುವರಿ 2018

# ನಾಗರಿಕರ ಬಜೆಟ್

## 2018-19

### ಉತ್ತಮ ಬೆಂಗಳೂರಿಗಾಗಿ ಒಂದು ಸಹಯೋಗ



**ichangemycity**

ಬೃಹತ್ ಬೆಂಗಳೂರು
ಮಹಾನಗರ ಪಾಲಿಕೆ



"ನಗರಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ನಾಗರಿಕರ ತೊಡುವಿಕೆಯನ್ನು ಉತ್ತೇಜಿಸುವುದು ಮತ್ತು ಅವರಿಗೆ ಅನುವು ಮಾಡಿಕೊಡುವುದು ಮುಖ್ಯವಾಗಿದೆ. ನಗರದ ಆಯವ್ಯಯವು ನಾಗರಿಕರ ಭಾಗವಹಿಸುವಿಕೆಯಿಂದ ಹೆಚ್ಚು ಪ್ರಯೋಜನ ಪಡೆಯುವ ಒಂದು ಪ್ರಮುಖ ಸಾಧನವಾಗಿದೆ. ಮೈಸಿಟಿಮೈಬಜೆಟ್–ನಂತಹ ಕಾರ್ಯಕ್ರಮಗಳನ್ನು ಉತ್ತೇಜಿಸಲು ಬಿಬಿಎಂಪಿ ಬದ್ಧವಾಗಿದೆ ಮತ್ತು ನಾಗರಿಕರ ಧ್ವನಿಗೆ ಸ್ಥಂದಿಸಲಿದೆ. ಮೂಲಸೌಕರ್ಯ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಎಲ್ಲಾ ವಾರ್ಡ್ ಕೌನ್ಸಿಲರ್‌ಗಳು ಮತ್ತು ನಾಗರಿಕ ಸಂಸ್ಥೆಯ ಅಧಿಕಾರಿಗಳು ನಾಗರಿಕರ ಇನ್ಪುಟ್‌ಗಳ ಬಗ್ಗೆ ಗಮನಹರಿಸುತ್ತಾರೆ ಎಂದು ನಾನು ಬರವಸೆ ನೀಡುತ್ತೇನೆ. ಭವಿಷ್ಯದ ಬೆಂಗಳೂರು ನಗರವು ಯುವಕರ ಕನಸ್ಸು ಮತ್ತು ಬಯಕೆಗೆ ತಕ್ಕಂತೆ ಇರುತ್ತದೆ."

**ಆರ್. ಸಂಪತ್ ರಾಜ್**
ಪೂಜ್ಯ ಮಹಾಪೌರರು, ಬಿಬಿಎಂಪಿ

---

"ಬಿಬಿಎಂಪಿಯು ಕ್ಷೇತ್ರವಾರು ಅತಿ ದೊಡ್ಡ ಪುರಸಭೆಯನ್ನು ನಿರ್ವಹಿಸುತ್ತಿದೆ. ನಾವು ಸೇವೆ ನೀಡುತ್ತಿರುವ ಪ್ರದೇಶ, ಮನೆಗಳು ಮತ್ತು ರಸ್ತೆಗಳ ವ್ಯಾಪ್ತಿಗೆ ಆಯವ್ಯಯವು ಸೀಮಿತವಾಗಿದೆ. ನಗರೀಕರಣದ ಪ್ರಮಾಣ ಮತ್ತು ವ್ಯಾಪಕತೆ ಹಾಗೂ ಸಾರ್ವಜನಿಕ ಸೇವಾ ವಿತರಣೆ ಮತ್ತು ಅದರ ಸವಾಲುಗಳ ಬಗೆಗಳ ಬೇಡಿಕೆಗಳನ್ನು ಗಮನಿಸಿದರೆ, ಸೇವಾ ವಿತರಣೆಯಲ್ಲಿ ಉತ್ತಮ ಪರಿಣಾಮಗಳನ್ನು ಸಾಧಿಸುವ ಸಲುವಾಗಿ ನಗರದ ನಾಗರಿಕರೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡು ಕೆಲಸದಲ್ಲಿ ಪಾಲುದಾರಿಕೆಯನ್ನು ನಿರ್ಮಾಣ ಮಾಡುವ ಅವಶ್ಯಕತೆಯಿದೆ. ಮೈಸಿಟಿಮೈಬಜೆಟ್ ತನ್ನ ಎರಡನೆಯ ವರ್ಷದಲ್ಲಿ ಕಾರ್ಯನಿರ್ವಹಿಸುತ್ತಿದೆ ಮತ್ತು ನಾಗರಿಕರ ಮನವಿಗಳನ್ನು ಯೋಜನೆಗಳಲ್ಲಿ ಸೇರಿಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ನಾವು ಮೊದಲ ಹೆಜ್ಜೆಯನ್ನು ತೆಗೆದುಕೊಂಡಿದ್ದೇವೆ. ನಾಗರಿಕರು, ವಾರ್ಡ್ ಕೌನ್ಸಿರ್‌ಗಳು ಮತ್ತು ನಾಗರಿಕ ಸಂಸ್ಥೆಯ ಅಧಿಕಾರಿಗಳ ನಡುವಿನ ಹೊಂದಾಣಿಕೆಯ ಕೆಲಸವು ಈ ಪಾಲುದಾರಿಕೆಯನ್ನು ಬಹುದೂರ ಕೊಂಡೊಯ್ಯುತ್ತದೆ. ಬಿಬಿಎಂಪಿಯ ಆಡಳಿತ ಮಂಡಳಿಗೆ ಐಚೇಂಜ್‌ಮೈಸಿಟಿ–ಯೊಂದಿಗೆ ಪಾಲುದಾರರಾಗಲು ಹೆಮ್ಮೆ ಎನಿಸುತ್ತದೆ."



**ಎನ್. ಮಜುನಾಥ್ ಪ್ರಸಾದ್, ಐಎಎಸ್**
ಆಯುಕ್ತರು, ಬಿಬಿಎಂಪಿ

---



"ಐಚೇಂಜ್‌ಮೈಸಿಟಿಯ ನಾಗರಿಕರು ಭಾಗವಹಿಸುವ ಆಯವ್ಯಯ ಅಭಿಯಾನ– ಮೈಸಿಟಿಮೈಬಜೆಟ್ ಬೆಂಗಳೂರಿನ ನಾಗರಿಕರು ಮತ್ತು ನಮ್ಮ ನಗರ ಸರ್ಕಾರದ ನಡುವಿನ ಪಾಲುದಾರಿಕೆಯಾಗಿದೆ. ನಗರ ಆಯವ್ಯಯದ ತಯಾರಿಕೆಯಲ್ಲಿ ನಿಮ್ಮನ್ನು ಬೆಂಗಳೂರಿನ ಪ್ರಜೆಯನ್ನಾಗಿ ತೊಡಗಿಸಿಕೊಳ್ಳುವುದರ ಬಗ್ಗೆ ಇದು ಕೇಂದ್ರೀಕೃತವಾಗಿದೆ. ನಮ್ಮ ಉದ್ಯಾನವನಗಳು, ತೆರೆದ ಸ್ಥಳಗಳು, ರಸ್ತೆಗಳು, ಪಾದಾಚಾರಿ ರಸ್ತೆಗಳು, ನೀರು, ಸಾರ್ವಜನಿಕ ಶೌಚಾಲಯಗಳು, ಸಾರಿಗೆ ಮತ್ತು ಇತರ ಮೂಲಭೂತ ಸೌಕರ್ಯಗಳ ಗುಣಮಟ್ಟವನ್ನು ನೇರವಾಗಿ ಸುಧಾರಿಸಬಹುದಾದ್ದರಿಂದ ಇದು ಆಯವ್ಯಯ ಮತ್ತು ನಾಗರಿಕ ಯೋಜನೆಗಳ ಮೇಲೆ ಕೇಂದ್ರೀಕರಿಸುತ್ತದೆ. ವಾರ್ಡ್ ಮತ್ತು ನೆರೆಹೊರೆಯ ಮಟ್ಟದ ಆಯವ್ಯಯ ಮತ್ತು ನಾಗರಿಕ ಯೋಜನೆಗಳ ದತ್ತಾಂಶಗಳು ನಾಗರಿಕರು, ವಾರ್ಡ್ ಕೌನ್ಸಿಲರ್‌ಗಳು ಮತ್ತು ನಾಗರಿಕ ಸಂಸ್ಥೆ ಅಧಿಕಾರಿಗಳ ನಡುವಿನ ಪಾಲುದಾರಿಕೆಯು ನಿಜವಾಗಿಯೂ ಬೆಂಗಳೂರನ್ನು ಪರಿವರ್ತಿಸಬಹುದು ಎಂದು ನಾವು ನಂಬುತ್ತೇವೆ"

**ಸಪ್ನಾ ಕರೀಮ್**
ಮುಖ್ಯಸ್ಥರು – ಸಿವಿಕ್ ಪಾರ್ಟಿಸಿಪೇಷನ್
ಜನಾಗ್ರಹ

## ಓದುಗರಿಗೆ ಒಂದು ಟಿಪ್ಪಣಿ

ಐಚೇಂಜ್‌ಮೈಸಿಟಿಯ 'ಮೈಸಿಟಿಮೈಬಜೆಟ್' ವಾರ್ಷಿಕ ಪಾಲ್ಗೊಳ್ಳುವಿಕೆಯ ಆಯವ್ಯಯದ ಎರಡನೇ ವರ್ಷದ ಅಭಿಯಾನವನ್ನು 11 ಜನವರಿ, 2018 ರಂದು ಬಿಬಿಎಂಪಿಯ ಸಹಯೋಗದೊಂದಿಗೆ ಪ್ರಾರಂಭಿಸಲಾಯಿತು.

ಕಳೆದ ವರ್ಷ 2017–18ರ ಆಯವ್ಯಯಕ್ಕೆ ಸಂಬಂಧಿಸಿದಂತೆ 67,114 ನಾಗರಿಕ ಆಯವ್ಯಯದ ಇನ್ಪುಟ್‌ಗಳನ್ನು ಡಿಸೆಂಬರ್ 14, 2016 ರಂದು ಎಲ್ಲಾ ನಾಗರಿಕ ಸಂಸ್ಥೆಗಳಿಗೆ ಸಲ್ಲಿಸಲಾಯಿತು. ಇನ್ಪುಟ್‌ಗಳನ್ನು ಸಲ್ಲಿಸಿದ ನಂತರ ನಾವು ಆಯವ್ಯಯದಲ್ಲಿ ಬಿಬಿಎಂಪಿ ಕಾರ್ಯಕ್ಷಮತೆಯನ್ನು ಮತ್ತು ನಾಗರಿಕ ಯೋಜನೆಗಳು, ಬಿಲ್‌ಗಳ ಪಾವತಿ ಮತ್ತು ಜಾಬ್ ಕೋಡ್‌ಗಳನ್ನು ಟ್ರ್ಯಾಕ್ ಮಾಡಿದ್ದೇವೆ. ಈ ವಿಶ್ಲೇಷಣೆಯ ಪ್ರಕಾರ, 67,114 ಬಜೆಟ್ ಇನ್ಪುಟ್‌ಗಳಲ್ಲಿ 12468 ಬಜೆಟ್ ಇನ್ಪುಟ್‌ಗಳನ್ನು ಬಿಬಿಎಂಪಿಯು ಅಭಿಯಾನದ ಮೊದಲ ವರ್ಷದಲ್ಲಿ ಕಾರ್ಯಗತಗೊಳಿಸುವ ಯೋಜನೆಗಳಲ್ಲಿ ಸಂಭಾವ್ಯವಾಗಿ ಇಟ್ಟುಕೊಂಡಿತ್ತು. ಇದು ನಾಗರಿಕರ ಬಜೆಟ್ ಇನ್ಪುಟ್‌ಗಳ ಶೇ. 22% ಆಗಿದೆ.

ಈ ವರ್ಷ ಈ ಅಭಿಯಾನ www.ichangemycity.com ಮೂಲಕ ಆನ್ಲೈನ್ ಮತ್ತು ನಗರದಾದ್ಯಂತ ಚಲಿಸಿದ ಬಜೆಟ್ ಬಸ್ ಮೂಲಕ ನಡೆಯಿತು. ಈ ವರ್ಷ ನಾಗರಿಕರು 26,297 ಬಜೆಟ್ ಇನ್ಪುಟ್‌ಗಳನ್ನು ಸಲ್ಲಿಸಿದ್ದಾರೆ. ಈ ವರ್ಷದ ಇನ್ಪುಟ್‌ಗಳನ್ನು ಕಳೆದ ವರ್ಷ ಪ್ರಸ್ತಾಪಿಸದೆ ಉಳಿದಿರುವ ಇನ್ಪುಟ್‌ಗೊಳೊಂದಿಗೆ ಬಿಬಿಎಂಪಿ ಮತ್ತು ಎಲ್ಲಾ ನಾಗರಿಕ ಸಂಸ್ಥೆಗಳಿಗೆ ಸಲ್ಲಿಸಲಾಗುತ್ತದೆ. 2018–19ರ ಆಯವ್ಯಯವನ್ನು ಫೆಬ್ರವರಿ – ಮಾರ್ಚ್ 2018 ರಲ್ಲಿ ಬಿಡುಗಡೆ ಮಾಡಿದಾಗ ನಾವು ಈ ಇನ್ಪುಟ್‌ಗಳನ್ನು ಟ್ರ್ಯಾಕ್ ಮಾಡುತ್ತೇವೆ. ಬಜೆಟ್ ಇನ್ಪುಟ್ ಅನ್ನು ಒದಗಿಸಿರುವ ಪ್ರತಿಯೊಬ್ಬರೊಂದಿಗೂ ನಾವು ಸಂವಹನ ನಡೆಸುತ್ತೇವೆ. ನಿಮ್ಮ ಬಜೆಟ್ ಇನ್ಪುಟ್ ಅನ್ನು ಸೇರಿಸಿರುವುದು ನಿಮಗೆ ಕಂಡುಬರದಿದ್ದರೆ, ವಾರ್ಡ್ ಸಭಾಗಳ ಮೂಲಕ ನಿಮ್ಮ ವಾರ್ಡ್ ಕೌನ್ಸಿಲರ್ ಮತ್ತು ನಾಗರಿಕ ಸಂಸ್ಥೆಯ ಅಧಿಕಾರಿಗಳನ್ನು ಭೇಟಿ ಮಾಡಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ. ಇನ್ನಷ್ಟು ತಿಳಿಯಲು ದಯವಿಟ್ಟು ಪುಟ 6ನ್ನು ನೋಡಿ.

ಬಜೆಟ್ ಇನ್ಪುಟ್‌ಗಳ ಪೂರ್ಣ ಪಟ್ಟಿಯನ್ನು ಪಡೆಯಲು, ವಾರ್ಡ್ ಸಭೆಯನ್ನು ಸಂಘಟಿಸಲು ಅಥವಾ ನಾವು ಮಾಡುವ ಕೆಲಸದ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ನೀವು sapna@ichangemycity.com ಗೆ ಬರೆಯಬಹುದು ಅಥವಾ 080–41277104 ಗೆ ಕರೆ ಮಾಡಬಹುದು.

ಆಯವ್ಯಯ ಮತ್ತು ನಾಗರಿಕ ಕೆಲಸಗಳ ಕುರಿತಾದ ನಿರಂತರ ಮಾಹಿತಿಗಾಗಿ ದಯವಿಟ್ಟು www.ichangemycity.com ಗೆ ಲಾಗ್ ಆನ್ ಮಾಡಿ.



ಸಪ್ನಾ ಕರೀಮ್

# ಪರಿವಿಡಿ


| | | Pg No: |
|---|---|---|
| 1 | ಮೈಸಿಟಿಮೈಬಜೆಟ್: ಉತ್ತಮ ಬೆಂಗಳೂರಿಗಾಗಿ ಒಂದು ಸಹಯೋಗ | 1 |
| 2 | 2018–19 ಆಯವ್ಯಯಕ್ಕಾಗಿ ಅಭಿಯಾನ | 2 |
| 3 | ನಗರದ ಸುತ್ತ ಬಜೆಟ್ ಬಸ್ ಎಲ್ಲೆಲ್ಲಿ ಸಂಚಾರ ಮಾಡಿತ್ತು? | 4 |
| 4 | ಕಳೆದ ವರ್ಷದ ಆಯವ್ಯಯಕ್ಕಾಗಿ ಅಭಿಯಾನ: 2017–18 | 5 |
| 5 | ಬಜೆಟ್ ಇನ್ಪುಟ್ ನಮೂನೆ | 7 |
| 6 | ಇನ್ಪುಟ್ ಸಲ್ಲಿಸುವ ನಮೂನೆ | 8 |

# 1 ಮೈಸಿಟಿಮೈಬಜೆಟ್: ಉತ್ತಮ ಬೆಂಗಳೂರಿಗಾಗಿ ಒಂದು ಸಹಯೋಗ

ಬೆಂಗಳೂರಿನ ಮೂಲಸೌಕರ್ಯ ಮತ್ತು ಗುಣಮಟ್ಟದ ಜೀವನಕ್ಕಾಗಿ ಅನೇಕ ಸುಧಾರಣೆಗಳನ್ನು ಮಾಡಬೇಕಾಗಿದೆ. ಪ್ರತಿ ನೆರೆಹೊರೆಯಲ್ಲೂ ಖರ್ಚು ಮಾಡಲಾಗುವ ಪ್ರತಿ ರೂಪಾಯಿ ವಾಸ್ತವವಾಗಿ ನಾಗರಿಕರ ಜೀವನದ ಗುಣಮಟ್ಟವನ್ನು ಸುಧಾರಿಸುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಅಂತಹ ಸುಧಾರಣೆಗಳಲ್ಲಿ ಒಂದಾಗಿದೆ. ಬಿಬಿಎಂಪಿ ಮತ್ತು ಇತರ ನಾಗರಿಕ ಸಂಸ್ಥೆಗಳ ಸೀಮಿತ ಸಂಪನ್ಮೂಲಗಳನ್ನು ಹೊಂದಿರುವುದರಿಂದ ಇದು ಮುಖ್ಯವಾಗಿದೆ.

ಪ್ರತಿಯೊಂದು ರೂಪಾಯಿಯನ್ನು ಬುದ್ಧಿವಂತಿಕೆಯಿಂದ ಖರ್ಚು ಮಾಡಲಾಗುತ್ತಿದೆ ಮತ್ತು ಎಲ್ಲಾ ನಾಗರಿಕರಿಗೆ ಜೀವನದ ಗುಣಮಟ್ಟವನ್ನು ಸುಧಾರಿಸಲು ಸಹಾಯವಾಗುತ್ತಿದೆ ಎಂಬುದನ್ನ ಖಾತ್ರಿಪಡಿಸಿಕೊಳ್ಳಲು ನಗರ ಮತ್ತು ನಗರದ ನಾಗರಿಕರ ನಡುವಿನ ಪಾಲುದಾರಿಕೆಯು ಮಹತ್ವದ್ದಾಗಿದೆ. ಇದರರ್ಥ, ನಾಗರಿಕರು, ವಾರ್ಡ್ ಕೌನ್ಸಿಲರ್ ಮತ್ತು ನಾಗರಿಕ ಸಂಸ್ಥೆಯ ಅಧಿಕಾರಿಗಳು ನೆರೆಹೊರೆಯ ಪ್ರಾಶಸ್ತ್ಯಗಳ ಬಗ್ಗೆ ಚರ್ಚಿಸಿ ಒಟ್ಟಿಗೆ ಕೆಲಸ ಮಾಡುತ್ತಾರೆ ಮತ್ತು ಅದಕ್ಕೆ ಅನುಗುಣವಾಗಿ ಆಯವ್ಯಯವನ್ನು ನಿಯೋಜಿಸಿ ಮತ್ತು ತಮ್ಮ ನೆರೆಹೊರೆಯಲ್ಲಿ ಯಾವ ನಾಗರಿಕ ಯೋಜನೆಗಳನ್ನು ಕೈಗೊಳ್ಳುತ್ತಾರೆ ಎಂಬುದನ್ನು ನೋಡಿಕೊಳ್ಳುತ್ತಾರೆ. ಉದಾಹರಣೆಗೆ, ಇಂತಹ ಸಂವಾದಗಳು ಆಯವ್ಯಯ ಮತ್ತು ನಾಗರಿಕ ಯೋಜನೆಗಳ ಡೇಟಾ ಮತ್ತು ಮಾಹಿತಿಯೊಂದಿಗೆ ಪ್ರತಿ 3 ತಿಂಗಳಗೊಮ್ಮೆ ನಿಯಮಿತವಾಗಿ ನಡೆಯುತ್ತಿದ್ದರೆ ನಾಗರಿಕರು ಮತ್ತು ಸರ್ಕಾರಗಳು ಮತ್ತು ಪ್ರತಿ ರೂಪಾಯಿಯನ್ನು ಸರಿಯಾರಿ ಖರ್ಚು ಮಾಡಲಾಗುತ್ತಿದೆ ಮತ್ತು ಎಲ್ಲರ ಜೀವನದ ಗುಣಮಟ್ಟವು ಸುಧಾರಿಸುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬಹುದು.

**ಮೈಸಿಟಿಮೈಬಜೆಟ್ ಏನು ಮಾಡುತ್ತದೆ ?**

- » ನೆರೆಹೊರೆಯ ಮಟ್ಟದಲ್ಲಿ ನಾಗರಿಕರನ್ನು, ವಾರ್ಡ್ ಕೌನ್ಸಿಲರ್ ಮತ್ತು ನಾಗರಿಕ ಸಂಸ್ಥೆಯ ಅಧಿಕಾರಿಗಳನ್ನು ಒಟ್ಟಿಗೆ ಸೇರಿಸುತ್ತದೆ
- » ಆಯವ್ಯಯ ಮತ್ತು ನಾಗರಿಕ ಕಾಮಗಾರಿಗಳ ಬಗ್ಗೆ ಮುಕ್ತ, ರಚನಾತ್ಮಕ ಸಂವಾದಗಳನ್ನು ಆಯೋಜಿಸುತ್ತದೆ
- » ನೆರೆಹೊರೆಯ ಮಟ್ಟದಲ್ಲಿ ಆಯವ್ಯಯ, ಕೆಲಸ ಮತ್ತು ಪಾವತಿಗಳ ಪ್ರಗತಿಯ ಬಗ್ಗೆ ಅವಧಿವಾರು ಡೇಟಾವನ್ನು ಒದಗಿಸುತ್ತದೆ.

## ಬೆಂಗಳೂರಿನ ಆಯವ್ಯಯದಲ್ಲಿ ನಾಗರಿಕರ ಭಾಗವಹಿಸುವಿಕೆಯನ್ನು ಸಕ್ರಿಯಗೊಳಿಸುವಿಕೆ:

### ಮೈಸಿಟಿಮೈಬಜೆಟ್‌ನ ಜೀವನಚಕ್ರ


**1** ಜನವರಿ–ಫೆಬ್ರುವರಿ
ನಾಗರಿಕರಿಂದ ಇನ್ಪುಟ್‌ಗಳನ್ನು ಸಂಗ್ರಹಿಸುವಿಕೆ
ವಾರ್ಷಿಕ ಭಾಗವಹಿಸುವಿಕೆಯ ಆಯವ್ಯಯದ ಬಗ್ಗೆ ಅಭಿಯಾನ

**2** ಫೆಬ್ರುವರಿ
ಬಿಬಿಎಂಪಿ ಮತ್ತು ಇತರ ನಾಗರಿಕ ಸಂಸ್ಥೆಗಳಿಗೆ ಇನ್ಪುಟ್ ಸಲ್ಲಿಸುವಿಕೆ
ನಾಗರಿಕರ ಆಯವ್ಯಯದ ವರದಿ



**3** ಮಾರ್ಚ್–ಏಪ್ರಿಲ್
ಬಿಬಿಎಂಪಿ ಆಯವ್ಯಯದ ವಿಶ್ಲೇಷಣೆ
ಆಯವ್ಯಯದ ವಿಶ್ಲೇಷಣಾ ವರದಿ

**4** ಏಪ್ರಿಲ್–ಡಿಸೆಂಬರ್
ಪ್ರತಿ ನಾಗರಿಕರ ಇನ್ಪುಟ್ ಮತ್ತು ಕಾಮಗಾರಿಯ ಸ್ಥಿತಿ ತಿಳಿಯುವಿಕೆ
ವಾರ್ಡ್ ಸಭೆಗಳು






# 2 2018–19 ಆಯವ್ಯಯಕ್ಕಾಗಿ ಅಭಿಯಾನ

ಮೈಸಿಟಿಮೈಬಜೆಟ್ ವಾರ್ಷಿಕ ಪಾಲ್ಗೊಳ್ಳುವಿಕೆಯ ಆಯವ್ಯಯದ ಎರಡನೇ ವರ್ಷದ ಅಭಿಯಾನವನ್ನು 11 ಜನವರಿ, 2018 ರಂದು ಬಿಬಿಎಂಪಿಯ ಸಹಯೋಗದೊಂದಿಗೆ ಪ್ರಾರಂಭಿಸಲಾಯಿತು.









**ಜನವರಿ–2018**

198 ವಾರ್ಡುಗಳ ಮೂಲಕ 26,297 ಬಜೆಟ್ ಇನ್ಪುಟ್‌ಗಳನ್ನು ಸಂಗ್ರಹಿಸಲಾಗಿದೆ

**ಬಜೆಟ್ ಬಸ್**
ಬಜೆಟ್ ಬಸ್ ನಾಗರಿಕರನ್ನು ಭೇಟಿ ಮಾಡುತ್ತಾ ನಗರದಾದ್ಯಂತ ಸಂಚಾರ ಮಾಡಿತ್ತು
11,150 ಇನ್ಪುಟ್‌ಗಳು.

**ಸಮುದಾಯ ಕಾರ್ಯಾಗಾರ**
ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳು ಮತ್ತು ಸಮುದಾಯ ಗುಂಪುಗಳು ಬೆಂಗಳೂರು ನಾಗರಿಕರ ಉತ್ಸವದ ಮೂಲಕ ಬಜೆಟ್ ಇನ್ಪುಟ್‌ಗಳನ್ನು ಸಲ್ಲಿಸಿದರು
2,450 ಇನ್ಪುಟ್‌ಗಳು.

**ಆನ್‌ಲೈನ್ ಪ್ರಚಾರಾಂದೋಲ**
ichangemycity.com ನಲ್ಲಿ ಆನ್‌ಲೈನ್ ಅಭಿಯಾನದ ಮೂಲಕ ಡಿಜಿಟಲ್ ಆಗಿ ನಾಗರಿಕರನ್ನು ತಲುಪಲಾಯಿತು
12,697 ಇನ್ಪುಟ್‌ಗಳು

* 94 ಸ್ಥಳಗಳಲ್ಲಿ ಬಜೆಟ್ ಬಸ್ ಸಂಚರಿಸಲಾಗಿತ್ತು

## 2018–19ರ ಆಯವ್ಯಯದಲ್ಲಿ ನಾಗರಿಕರು ಏನನ್ನು ಬಯಸುತ್ತಾರೆ?

**26,297** ನಾಗರಿಕರ ಇನ್ಪುಟ್‌ಗಳು




| ವಿಭಾಗ | ಶೇಕಡಾ | ಇನ್ಪುಟ್‌ಗಳು |
|---|---|---|
| ಮಳೆ ನೀರು ಚರಂಡಿಗಳು | 2% | 631 |
| ರಸ್ತೆಗಳು ಮತ್ತು ಸುಸಜ್ಜಿತ ವಾಹನ ಸಂಚಾರ | 21% | 5,407 |
| ಸಾರಿಗೆ ಸೇವೆ | 4% | 1,037 |
| ಆರೋಗ್ಯ ಮತ್ತು ನೈರ್ಮಲ್ಯ | 19% | 5,028 |
| ಕೆರೆಗಳು | 6% | 1,585 |
| ಪಾದಾಚಾರಿ ರಸ್ತೆಗಳು ಮತ್ತು ಸುಸಜ್ಜಿತ ಕಾಲುದಾರಿ | 18% | 4,746 |
| ನೀರು ಸರಬರಾಜು ಮತ್ತು ಒಳಚರಂಡಿ | 7% | 1,812 |
| ಅಪರಾಧ ಮತ್ತು ಸುರಕ್ಷತೆ | 8% | 2,107 |
| ಮರಗಳು, ಉದ್ಯಾನಗಳು ಮತ್ತು ಆಟದ ಮೈದಾನಗಳು | 15% | 3,944 |

## 2017-18 ಮತ್ತು 2018-19ರಲ್ಲಿ ಹೋಲಿಕೆ ಮಾಡಲಾದ ಮೊದಲ 5 ವರ್ಗಗಳು

| | 2017-18 | 2018-19 |
|---|---|---|
| ಆರೋಗ್ಯ ಮತ್ತು ನೈರ್ಮಲ್ಯ | 15% | ↑ 19% |
| ರಸ್ತೆಗಳು ಮತ್ತು ಸುಸಜ್ಜಿತ ವಾಹನ ಸಂಚಾರ | 18% | ↑ 21% |
| ಪಾದಾಚಾರಿ ರಸ್ತೆಗಳು ಮತ್ತು ಸುಸಜ್ಜಿತ ಕಾಲುದಾರಿ | 23% | ↓ 18% |
| ಮರಗಳು, ಉದ್ಯಾನಗಳು ಮತ್ತು ಆಟದ ಮೈದಾನಗಳು | 12% | ↑ 15% |
| ಅಪರಾಧ ಮತ್ತು ಸುರಕ್ಷತೆ | 7% | ↑ 8% |

*ಒಟ್ಟು ನಾಗರಿಕ ಬಜೆಟ್ % ಶೇಖಡವಾರು


## 2018-19 ಆಯವ್ಯಯಕ್ಕೆ ಯಾವ ಸಂಸ್ಥೆಗಳು ಹೆಚ್ಚಿನ ಇನ್ಪುಟ್‌ಗಳನ್ನು ಸ್ವೀಕರಿಸಿವೆ?





ಬಿಬಿಎಂಪಿ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ । ಬಿಡಬ್ಲೂಎಸ್‌ಎಸ್‌ಬಿ: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಬಿಎಂಟಿಸಿ: ಬೆಂಗಳೂರು ಮಹಾನಗರ ಸಾರಿಗೆ ನಿಗಮ । ಬಿಟಿಪಿ: ಬೆಂಗಳೂರು ನಗರ ಸಂಚಾರ ಪೊಲೀಸ್

## ಬಿಬಿಎಂಪಿಯು ಸ್ವೀಕರಿಸಿರುವ ಒಟ್ಟು ಇನ್ಪುಟ್‌ಗಳು

ಕಳೆದ ವರ್ಷ ಬಿಬಿಎಂಪಿಗೆ ಸಲ್ಲಿಸಿದ್ದ 57,194 ಆಯವ್ಯಯದ ಇನ್ಪುಟ್‌ಗಳಲ್ಲಿ 12,468 ಇನ್ಪುಟ್‌ಗಳನ್ನು ನಾಗರಿಕ ಯೋಜನೆಗಳಲ್ಲಿ ಜಾರಿಗೊಳಿಸಲು ಸೇರಿಸಲಾಗಿದೆ. ಉಳಿದಿರುವ 44,726 ಇನ್ಪುಟ್‌ಗಳನ್ನು ಮುಂಬರುವ 2018-19ರ ಆಯವ್ಯಯದಲ್ಲಿ ಸೇರ್ಪಡೆಗಾಗಿ ಸಲ್ಲಿಸಲಾಗುವುದು.




## 3 ನಗರದ ಸುತ್ತ ಬಜೆಟ್ ಬಸ್ ಎಲ್ಲೆಲ್ಲ ಸಂಚಾರ ಮಾಡಿತು?




### ಬಜೆಟ್ ಬಸ್ ತಂಗಿದ್ದ ಸ್ಥಳಗಳ ಪಟ್ಟಿ:

- ಅಬ್ಬಿಗರೆ
- ಅಗರ ಅಂಜನೇಯ ದೇವಸ್ಥಾನ
- ಎಎಮ್‌ಆರ್ ಟೆಕ್ ಪಾರ್ಕ್
- ಅಂಜನ್ ನಗರ
- ಬಾಬುಸಪಾಳ್ಯ ಗಣೇಶ ದೇವಾಲಯ
- ಬಗಲಗುಂಟೆ
- ಬನಶಂಕರಿ
- ಬಾಣಾವರ
- ಬನ್ನೇರುಘಟ್ಟ ಮುಖ್ಯ ರಸ್ತೆ
- ಬಾಪುಜಿ ನಗರ ಬಸ್ ನಿಲ್ದಾಣ
- ಬೇಗೂರ್ ಪೊಲೀಸ್ ಠಾಣೆ
- ಬೆಳ್ಳಂದ್ದೂರ್ ಕೆರೆ ಬಿಬಿಎಂಪಿ ಕಚೇರಿ
- ಬಿಗ್ ಬಜಾರ್ (ಓರಿಯನ್ ಮಾಲ್)
- ಬಿಳೇಕಹಳ್ಳಿ
- ಬೊಮ್ಮನಹಳ್ಳಿ ಬಿಬಿಎಂಪಿ ಕಚೇರಿ
- ಸೆಂಟ್ರಲ್ ಬಸ್ ನಿಲ್ದಾಣ (ಮಂತ್ರಿ ಮಾಲ್)
- ಚಾಲುಕ್ಯ ಹೋಟೆಲ್ ಸರ್ಕಲ್ (ಆರ್‌ಸಿ ಕಾಲೇಜು)
- ಡೈರಿ ಸರ್ಕಲ್
- ದೇವಯ್ಯ ಪಾರ್ಕ್
- ದೇವೇಗೌಡ ಪೆಟ್ರೋಲ್ ಬಂಕ್
- ಡಾ. ವಿಷ್ಣುವರ್ಧನ್ ರಸ್ತೆ, ಉತ್ತರಹಳ್ಳಿ
- ಎಲಿಮೆಂಟ್ ಮಾಲ್
- ಗೊಲ್ಲರಹಟ್ಟಿ
- ಗೋಪಾಲನ್ ಸಿಗ್ನೇಚರ್ ಮಾಲ್, ಕೆಆರ್ ಪುರಂ
- ಗುರುಗುಂಟೆ ಪಾಳ್ಯ
- ಹೆಚ್‌ಎಎಲ್ ಪೊಲೀಸ್ ಠಾಣೆ
- ಹಂಪಿ ನಗರ ಬಸ್ ನಿಲ್ದಾಣ
- ಹರಿಶ್ಚಂದ್ರ ಘಾಟ್
- ಹೆಗ್ಗನಹಳ್ಳಿ ಬಸ್ ನಿಲ್ದಾಣ
- ಹೆಗ್ಗನಹಳ್ಳಿ ಕ್ರಾಸ್
- ಹೆಣ್ಣೂರು ಕ್ರಾಸ್ ಮಸೀದಿ
- ಹೊಂಬೇಗೌಡ ನಗರ್ ಆಟದ ಮೈದಾನ
- ಹೌಸಿಂಗ್ ಬೋರ್ಡ್
- ಎಚ್‌ಎಸ್‌ಆರ್ ಲೇಔಟ್ ಬಿಡಿಎ ಕಾಂಪ್ಲೆಕ್ಸ್
- ಇಂಡಿಯನ್ ಎಕ್ಸ್‌ಪ್ರೆಸ್ ಸಿಗ್ನಲ್
- ಜಾಲಹಳ್ಳಿ ವೃತ್ತ
- ಜಯದೇವ ಸರ್ಕಲ್
- ಜಯನಗರ 4ನೇ ಬ್ಲಾಕ್
- ಜ್ಞಾನಭಾರತಿ ಪೊಲೀಸ್ ಠಾಣೆ
- ಕೆಂಗೇರಿ ಬಸ್ ನಿಲ್ದಾಣ
- ಕೋರಮಂಗಲ ಬಿಡಿಎ ಕಾಂಪ್ಲೆಕ್ಸ್
- ಕೆಆರ್ ಪುರಂ ರೈಲು ನಿಲ್ದಾಣ
- ಕೆಆರ್ ಪುರಂ ತರಕಾರಿ ಮಾರುಕಟ್ಟೆ
- ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣೆ
- ಕುಂದನಹಳ್ಳಿ ಗೇಟ್
- ಕುರುಬರಹಳ್ಳಿ (ಬಸ್ ನಿಲ್ದಾಣ)
- ಲಾಲ್‌ಬಾಗ್
- ಲಾಲ್‌ಬಾಗ್ ಊರ್ವಶಿ ಚಿತ್ರಮಂದಿರದ ರಸ್ತೆ
- ಲುಂಬಿನಿ ಗಾರ್ಡನ್ಸ್
- ಮಡಿವಾಳ ಮಾರ್ಕೆಟ್
- ಮಲ್ಲತಳ್ಳಿ (ಅಂಬೇಡ್ಕರ್ ಕಾಲೇಜ್)
- ಮಲ್ಲೇಶ್ವರಂ 18ನೇ ಕ್ರಾಸ್
- ಮಲ್ಲೇಶ್ವರಂ ವೃತ್ತ
- ಮನುವನ ಬಸ್ ನಿಲ್ದಾಣ
- ಮಾರಪ್ಪನ ಪಾಳ್ಯ ಬಸ್ ನಿಲ್ದಾಣ
- ಮಾರತ್ತಹಳ್ಳಿ ಸೇತುವೆ
- ಮರಿಯಪ್ಪನಪಾಳ್ಯ ಪಾರ್ಕ್
- ಮಾರುತಿ ಮಂದಿರ ಬಸ್ ನಿಲ್ದಾಣ
- ಮಾರುತಿ ಸೇವಾ ನಗರ
- ಎಂಎಸ್ ಪಾಳ್ಯ
- ಮೂಡಲಪಾಳ್ಯ ವೃತ್ತ
- ನಾಗರಭಾವಿ ವೃತ್ತ
- ನ್ಯಾಷನಲ್ ಕಾಲಾಜ್ ಗ್ರೌಂಡ್
- ನ್ಯಾಷನಲ್ ಪಬ್ಲಿಕ್ ಸ್ಕೂಲ್ ಚುಂಚಗಟ್ಟೆ
- ನವರಂಗ್ ಚಿತ್ರಮಂದಿರ
- ಪವಿತ್ರ ಪ್ಯಾರಡೈಸ್ ವೃತ್ತ
- ಪೀಣ್ಯ 2ನೇ ಹಂತ
- ಫೀನಿಕ್ಸ್ ಮಾರುಕಟ್ಟೆ
- ಪ್ರಸನ್ನ ಚಿತ್ರಮಂದಿರ ಬಸ್ ನಿಲ್ದಾಣ
- ಪ್ರಶಾಂತ ನಗರ ವೃತ್ತ
- ಪ್ರೆಸ್ಟೀಜ್ ಶಾಂತಿನಿಕೇತನ, ಹೂಡಿ
- ರಾಘವೇಂದ್ರ ವೃತ್ತ
- ರಾಗಿಗುಡ್ಡ
- ರಾಮಮೂರ್ತಿ ನಗರ ಉತ್ತಮ್ ಸಾಗರ್
- ಸಜ್ಜನ್ ರಾವ್ ವೃತ್ತ
- ಸಂಜಯ್ ಗಾಂಧಿ ಆಸ್ಪತ್ರೆ
- ಶೇಷಾದ್ರಿಪುರಂ ಕಾಲೇಜು
- ಶೆಟ್ಟಿಹಳ್ಳಿ
- ಸೌತ್ ಎಂಡ್ ಸರ್ಕಲ್ (ಸುರಾನಾ ಕಾಲೇಜು)
- ಸುಧಾಮ ನಗರ
- ಸುಜಾತಾ ಚಿತ್ರಮಂದಿರ ಬಸ್ ನಿಲ್ದಾಣ
- ಸುಮ್ಮನಳ್ಳಿ ವೃತ್ತ
- ಸುಂಕದಕಟ್ಟೆ
- ಥಣಿಸಂದ್ರ ಬಸ್ ನಿಲ್ದಾಣ
- ಟಿವಿಎಸ್ ಕ್ರಾಸ್
- ಉಡುಪಿ ಗಾರ್ಡನ್
- ಉಳ್ಳಾಲ ಉಪನಗರ (ಸುರಾನಾ ಕಾಲೇಜು)
- ವರ್ತೂರ್ ಫೋರಮ್ ಮಾಲ್
- ವಿದ್ಯಾರಣ್ಯಪುರ
- ವಿಜಯನಗರ ಬಸ್ ನಿಲ್ದಾಣ
- ವಿಲ್ಸನ್ ಗಾರ್ಡನ್ ಸುತ್ತಮುತ್ತಲಿನ ಪ್ರದೇಶ
- ಯಶವಂತಪುರ ಬಸ್ ನಿಲ್ದಾಣ
- ಯಡಿಯೂರು ಕೆರೆ
- ಯಲಹಂಕ

# 4 ಕಳೆದ ವರ್ಷದ ಆಯವ್ಯಯಕ್ಕಾಗಿ ಅಭಿಯಾನ: 2017-18

ಮೈಸಿಟಿಮೈಬಜೆಟ್ ಮೊಟ್ಟ ಮೊದಲೆನೆಯದಾಗಿ ಡಿಸೆಂಬರ್ 2016 ರಲ್ಲಿ ಬಿಬಿಎಂಪಿ ಸಹಯೋಗದೊಂದಿಗೆ ಆರಂಭಿಸಲಾಯಿತು. ಬಿಬಿಎಂಪಿಯ ಪೂಜ್ಯ ಮಹಾಪೌರರು, ಉಪಮಹಾಪೌರರು ಮತ್ತು ಆಯುಕ್ತರು ಉದ್ಘಾಟನೆ ಮಾಡಿದ್ದರು.






### ಅಕ್ಟೋಬರ್ – ಡಿಸೆಂಬರ್ 2016

ಬಿಬಿಎಂಪಿ ವ್ಯಾಪ್ತಿಯ 198 ವಾರ್ಡುಗಳಿಂದ 67,114 ಇನ್ಪುಟ್‌ಗಳನ್ನು ಸಂಗ್ರಹಿಸಲಾಗಿತ್ತು

**ಬಜೆಟ್ ಬಸ್**
ನಗರದಾದ್ಯಂತ ಸಂಚರಿಸದ ಬಜೆಟ್ ಬಸ್ ನಾಗರಿಕರನ್ನು ಭೇಟಿ ಮಾಡಿತು, ಅರಿವು ಮೂಡಿಸಿತು ಮತ್ತು ಬಜೆಟ್ ಇನ್ಪುಟ್‌ಗಳನ್ನು ಸಂಗ್ರಹಿಸಿತು.

**ಸಮುದಾಯ ಕಾರ್ಯಾಗಾರ**
ಆರ್‌ಡಬ್ಲೂಎ-ಗಳು ಮತ್ತು ಇತರ ಗುಂಪುಗಳಲ್ಲಿ ಸಮುದಾಯ ಕಾರ್ಯಾಗಾರಗಳನ್ನು ನಡೆಸಲಾಯಿತು

**ಆನ್‌ಲೈನ್ ಪ್ರಚಾರಾಂದೋಲ**
ನಾಗರಿಕರನ್ನು ತಲುಪಲು ichangemycity.com ಮೂಲಕ ಆನ್‌ಲೈನ್ ಪ್ರಚಾರಾಂದೋಲವನ್ನು ನಡೆಸಲಾಯಿತು

ನಾಗರಿಕ ಸಲ್ಲಿಕೆಯ ಸಮಾರಂಭದಲ್ಲಿ ನಾಗರಿಕ ಆಯವ್ಯಯ ವರದಿಯನ್ನು ಪೂಜ್ಯ ಮಹಾಪೌರರಿಗೆ, ಆಯುಕ್ತರಿಗೆ ಮತ್ತು ನಾಗರಿಕ ಸಂಸ್ಥೆಯ ಮುಖ್ಯಸ್ಥರಿಗೆ ಸಲ್ಲಿಸಲಾಯಿತು.








## ಬಿಬಿಎಂಪಿಯ ಆಯವ್ಯಯದಲ್ಲಿ ಎಷ್ಟು ನಾಗರಿಕ ಇನ್ಪುಟ್‌ಗಳನ್ನು ಸೇರಿಸಲಾಗಿದೆ?

ನಾವು ಬಿಬಿಎಂಪಿಯ ಆಯವ್ಯಗಳು, ಗ್ರಾಂಟ್‌ಗಳು, ಟೆಂಡರ್‌ಗಳು ಮತ್ತು ಜಾಬ್ ಕೋಡ್‌ಗಳನ್ನು ವಿಶ್ಲೇಷಿಸಿದ್ದೇವೆ ಮತ್ತು 2017-18ರಲ್ಲಿ 12,468 ನಾಗರಿಕ ಇನ್ಪುಟ್‌ಗಳನ್ನು ಜಾರಿಗೆ ತರಲಾಗಿದೆ ಎಂಬುದನ್ನು ಖಚಿತಪಡಿಸಿಕೊಂಡಿದ್ದೇವೆ.

**22%**
ನಾಗರಿಕ ಇನ್ಪುಟ್‌ಗಳು ಸೇರ್ಪಡೆಗೊಂಡಿದೆ

**12,468**

| | |
|---|---|
| ಹೊಸ ಜಾಬ್ ಕೋಡ್ಸ್ | 3,811 |
| ನಗರೋತ್ಥಾನ | 2,985 |
| ಹೊಸ ಟೆಂಡರ್‌ಗಳು | 3,547 |
| ಈಗಾಗಲೇ ಜಾರಿಗೊಳಿಸಿರುವ ಕಾಮಗಾರಿಗಳು ಮತ್ತು ಪಾವತಿಸಿದ ಬಿಲ್ಲುಗಳು | 2,125 |

**ಸಂಭಾವ್ಯ ಕಾಮಗಾರಿಯ ಒಟ್ಟು ಮೌಲ್ಯ**

**515 ಕೋಟಿ**

ಬಿಬಿಎಂಪಿ-2017-18ಕ್ಕಾಗಿ ಪಡೆದ ಒಟ್ಟು ನಾಗರಿಕ ಆಯವ್ಯಯ ಇನ್ಪುಟ್‌ಗಳು
**57,194**

## ವಾರ್ಡ್ ಸಭೆ- ಪ್ರತಿ ಕೆಲಸದ ಟ್ರಾ ್ಯಕಿಂಗ್ ಸ್ಥಿತಿ

ವಾರ್ಡ್ ಸಭೆಗಳು ಆಯವ್ಯಯ ಮತ್ತು ನಾಗರಿಕ ಕಾಮಗಾರಿಗಳ ಸ್ಥಿತಿಯನ್ನು ರಚನಾತ್ಮಕ ಸಂವಾದದ ಮೂಲಕ ಚರ್ಚಿಸಲು ನಾಗರಿಕರು ಮತ್ತು ಸಮುದಾಯ ಗುಂಪುಗಳು, ವಾರ್ಡ್ ಕೌನ್ಸಿಲರ್‌ಗಳು ಮತ್ತು ನಾಗರಿಕ ಸಂಸ್ಥೆಯ ಅಧಿಕಾರಿಗಳನ್ನು ಒಟ್ಟಾಗಿ ತರುವ ವೇದಿಕೆಗಳಾಗಿವೆ.

**20**
ವಾರ್ಡ್ ಸಭೆಗಳನ್ನು ಆಯೋಜಿಸಲಾಗಿದ್ದು

**140**
ಆರ್‌ಡಬ್ಲೂಎ -ಗಳೊಂದಿಗೆ

**50,400**
ನಾಗರಿಕರು ಪ್ರತಿನಿಧಿಸಿದ್ದಾರೆ

**100%**
ವಾರ್ಡ್ ಕೌನ್ಸಿಲರ್‌ಗಳ ಹಾಜರಾತಿ ಮತ್ತು ನಾಯಕತ್ವ

**84%**
ಎಲ್ಲಾ ವಾರ್ಡುಗಳಲ್ಲಿ ನಾಗರಿಕ ಅಧಿಕಾರಿಗಳ ಹಾಜರಾತಿ

**194**
ಬಿಬಿಎಂಪಿ, ಬೆಸ್ಕಾಮ್, ಬಿಟಿಪಿ, ಬಿಎಂಟಿಸಿ, ಬಿಡಬ್ಲೂಎಸ್‌ಎಸ್‌ಬಿ ಮತ್ತು ಬಿಸಿಪಿ-ಯಿಂದ ನಾಗರಿಕ ಸಂಸ್ಥೆಯ ಅಧಿಕಾರಿಗಳು ಭಾಗವಹಿಸಿದ್ದರು.

## 5 ಬಜೆಟ್ ಇನ್ಪುಟ್ ನಮೂನೆ

ನಾವು ಈ ಕೆಳಗಿನ ನಾಗರಿಕ ಬಜೆಟ್ ಇನ್ಪುಟ್ ನಮೂನೆಯನ್ನು ನೀಡಿದ್ದು ಅದರಲ್ಲಿ ನಾಗರಿಕರು ಬೆಂಗಳೂರಿನ ಆಯವ್ಯಯ-2018-19ಕ್ಕೆ ತಮ್ಮ ಇನ್ಪುಟ್‌ಗಳನ್ನು ನೀಡಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ಬೆಂಗಳೂರು ಬಜೆಟ್
### ನಾಗರಿಕರ ಇನ್‌ಪುಟ್ ಫಾರಂ
### Bengaluru Budget Citizen Input Form

MyCityMyBudget Powered by ichangemycity

ಹೆಸರು Name Please fill in capitals

ಮೊಬೈಲ್ Mobile

ಇಮೇಲ್ ಐಡಿ । Email ID

**ಫಾರಂ ತುಂಬುವ ಮುನ್ನ ಕೆಳಗಿನ ಸೂಚನೆಗಳನ್ನು ಗಮನಿಸಿ / Please refer the instructions below to fill the form**

**ಬಜೆಟ್ ಕೆಟಗರಿ ಲಿಸ್ಟ್ | Budget Category Listing**

Category / ವರ್ಗ

1. Provide adequate Bus Shelters
ಮತ್ತಷ್ಟು ಬಸ್ ನಿಲ್ದಾಣಗಳನ್ನು ಒದಗಿಸಿ
2. Provide adequate Street lights
ಮತ್ತಷ್ಟು ರಸ್ತೆ ದೀಪಗಳನ್ನು ಒದಗಿಸಿ
3. Provide adequate Public Toilets
ಮತ್ತಷ್ಟು ಸಾರ್ವಜನಿಕ ಶೌಚಾಲಯಗಳನ್ನು ಒದಗಿಸಿ
4. Improve quality of existing Public Toilets
ಅಸ್ತಿತ್ವದಲ್ಲಿರುವ ಸಾರ್ವಜನಿಕ ಶೌಚಾಲಯಗಳ ಗುಣಮಟ್ಟವನ್ನು ಸುಧಾರಿಸಿ
5. Improve quality of Parks & Playgrounds
ಉದ್ಯಾನವನಗಳು ಮತ್ತು ಆಟದ ಮೈದಾನಗಳ ಗುಣಮಟ್ಟವನ್ನು ಸುಧಾರಿಸಿ
6. Improve sports facilities in Playgrounds
ಆಟದ ಮೈದಾನಗಳಲ್ಲಿ ಕ್ರೀಡೆ ಸೌಲಭ್ಯಗಳನ್ನು ಸುಧಾರಿಸಿ
7. Provide good driveable Roads
ಸಂಚರಿಸಲು ಉತ್ತಮವಾದಂತಹ ರಸ್ತೆಗಳನ್ನು ಒದಗಿಸಿ
8. Improve Street Signage
ಸ್ಟ್ರೀಟ್ ಸಂಕೇತ ಸುಧಾರಿಸಿ
9. Provide safe and walkable Footpaths
ಸುರಕ್ಷಿತ ಮತ್ತು ನಡೆಯಬಲ್ಲ ಪಾದಚಾರಿಗಳನ್ನು ಒದಗಿಸಿ
10. Improve Roadside Drains
ರಸ್ತೆ ಬದಿಯ ಚರಂಡಿ ಸುಧಾರಿಸಿ
11. Install CCTV cameras to improve neighborhood safety
ನೆರೆಹೊರೆಯ ಸುರಕ್ಷತೆಯನ್ನು ಸುಧಾರಿಸಲು ಸಿಸಿಟಿವಿ ಕ್ಯಾಮೆರಾಗಳನ್ನು ಸ್ಥಾಪಿಸಿ
12. Provide Skywalks / Flyovers / Underpasses
ಸ್ಕೈವಾಲ್ಕ್ಸ್ / ಫ್ಲೈಓವರ್ಗಳು / ಅಂಡರ್ ಪಾಸ್ ಗಳನ್ನು ಒದಗಿಸಿ
13. Improve Garbage collection & management
ಕಸ ಸಂಗ್ರಹಣೆ ಮತ್ತು ನಿರ್ವಹಣೆ ಸುಧಾರಿಸಿ
14. Provide Water supply
ನೀರು ಸರಬರಾಜು ಒದಗಿಸಿ
15. Provide Sewage lines
ಒಳ ಚರಂಡಿ ಸೌಲಭ್ಯ ಒದಗಿಸಿ
16. Improve Storm Water Drains
ಮಳೆ ನೀರು ಕಾಲುವೆಗಳನ್ನು ಸುಧಾರಿಸಿ
17. Rejuvenate Lakes and beautify surroundings
ಕೆರೆ ಮತ್ತು ಕೆರೆ ಸುತ್ತಮುತ್ತಲಿನ ಪ್ರದೇಶ ಪುನರುಜ್ಜೀವನಗೊಳಿಸಿ
18. Provide Traffic & Pedestrian lights
ಸಂಚಾರ ಮತ್ತು ಪಾದಚಾರಿ ದೀಪಗಳನ್ನು ಒದಗಿಸಿ
19. Plant saplings to improve green cover
ಹಸಿರನ್ನು ಉತ್ತಮಗೊಳಿಸಲು ಸಸಿಗಳನ್ನು ನೆಡಿ

ವರ್ಗ: ನಿಮಗೆ ನೀಡಿರುವ / ಪ್ರದರ್ಶಿಸಿರುವ ಬಜೆಟ್ ಕೆಟೆಗರಿ ಲಿಸ್ಟ್ ಅನ್ನು ಬಳಸಿಕೊಂಡು ನಿಮಗೆ ಸಂಬಂಧಿಸಿದ ಸಮಸ್ಯೆ ಮತ್ತು ಅದಕ್ಕೆ ಸಂಬಂಧಿಸಿದ ಸರಿಯಾದ ಸಂಖ್ಯೆಯನ್ನು ನಮೂದಿಸಿ.
Category: Use the Budget Category List provided to you or displayed, and enter the appropriate number and letter associated with your issue.

**Category #** ವರ್ಗ # ☐ **Location:** ಸ್ಥಳ: ..........

**Category #** ವರ್ಗ # ☐ **Location:** ಸ್ಥಳ: ..........

**Category #** ವರ್ಗ # ☐ **Location:** ಸ್ಥಳ: ..........

**Category #** ವರ್ಗ # ☐ **Location:** ಸ್ಥಳ: ..........

**Category #** ವರ್ಗ # ☐ **Location:** ಸ್ಥಳ: ..........

ichangemycity

Supported by The Asia Foundation



## 6 ಇನ್ಪುಟ್ ಸಲ್ಲಿಸುವ ನಮೂನೆ

ಎಲ್ಲಾ ನಾಗರಿಕ ಇನ್ಪುಟ್‌ಗಳನ್ನು ಬಿಬಿಎಂಪಿ ಮತ್ತು ಇತರ ನಾಗರಿಕ ಸಂಸ್ಥೆಗಳಿಗೆ ಸಲ್ಲಿಸಲಾಗುವ ನಮೂನೆಯನ್ನು ಈ ಕೆಳಗೆ ನೀಡಿದ್ದೇವೆ. ನಾವು ಉದಾಹರಣೆಗಳನ್ನು ಕೂಡಾ ನೀಡಿದ್ದೇವೆ. ನಾವು ಬಿಬಿಎಂಪಿ ಮತ್ತು ಇತರ ನಾಗರಿಕ ಸಂಸ್ಥೆಯ ಅಧಿಕಾರಿಗಳಿಗೆ ವಲಯ, ವಾರ್ಡ್ ಮತ್ತು ಆರ್‌ಡಬ್ಲೂಎ ಮಟ್ಟಗಳಲ್ಲಿ ನಾಗರಿಕರ ಇನ್ಪುಟ್ ಪಟ್ಟಿಗಳನ್ನೂ ಒದಗಿಸುತ್ತೇವೆ.

### ನಾಗರಿಕರ ಆಯವ್ಯಯದ ಇನ್ಪುಟ್‌ಗಳು 2018-19

| PB Request ID | Agency Name | Department | Ward No | Ward Name | Division | Zone | Budget Category | Location | Lat & Long |
|---|---|---|---|---|---|---|---|---|---|
| 87028 | BBMP | Electrical | 18 | Radhakrishna Temple | Hebbala | East | Provide adequate Street lights | Sanjay Nagar Main Road, CIL Layout A Block, Judicial Colony, Raj Mahal Vilas 2nd Stage, Sanjaynagar, Bengaluru, Karnataka 560094 | 13.0333672 77.5757074 |
| 79203 | BBMP | Engineering | 149 | Varthur | Mahadevapura | Mahadevapura | Provide good driveable Roads | Balagere, Bengaluru, Karnataka 560087 | 12.9378152 77.7130305 |
| 90591 | BMTC | Engineering | 195 | Konankunte | Bangalore South | Bommanahalli | Provide adequate Bus Shelters | 1St Main 4Th Cross Shreyas Colony, J P Nagar 7Th P | 12.8874157 77.5863325 |
| 81459 | BBMP | Lake | 150 | Bellanduru | Mahadevapura | Mahadevapura | Rejuvenate Lakes and beautufy surroundings | Deverabeesanhalli | 12.9298913 77.6844597 |
| 79339 | BBMP | Health | 104 | Govindaraja Nagara | Govindaraja Nagara | West | Improve Garbage collection & management | 1567, 7th Main Rd, Govindaraja Nagar Ward, Govindarajanagar, Vijaya Nagar, Bengaluru, Karnataka 560079, India | 12.97734481 77.5342709 |
| 105351 | BBMP | Engineering | 122 | Kempapura Agrahara | Vijaya Nagara | South | Improve Roadside Drains | 19, 7th Main Rd, Kempapura Agrahara, Bengaluru, Karnataka 560023 | 12.972847 77.554688 |
| 106066 | BBMP | Forest | 97 | Dayananda Nagara | Rajaji Nagara | West | Plant trees to improve green cover | Bandireddy Circle, Bashyam Nagar, Lakshminarayanapuram, Rajaji Nagar, Bengaluru, Karnataka 560021 | 12.9914824 77.5638255 |
| 81983 | BWSSB | Engineering | 192 | Begur | Bangalore South | Bommanahalli | Provide Sewage lines | Doddakammanahalli Main Rd, Hulimavu, Bengaluru, Karnataka 560076 | 12.8660302 77.5996397 |
| 105584 | BTP | Traffic Management Center | 120 | Cotton Pete | Gandhi Nagara | West | Provide Traffic & Pedestrain lights | 28, Tank Bund Rd, Subhash Nagar, Cottonpete, Bengaluru, Karnataka 560023, India | 12.97059474 77.56654032 |

Supported by

manipalfoundation

ichangemycity

JANAAGRAHA
Janaagraha Centre for Citizenship & Democracy

Janaagraha Centre for Citizenship and Democracy
4th Floor, UNI Building, Thimmaiah Road, Vasantha Nagara, Bengaluru-560052
Phone: 080-40790400, Fax: 080-41277104
Email: sapna@ichangemycity.com
www.ichangemycit.com | www.facebook.com/ichangemycity | @IChangeMyCity